



ಮೈಸೂರಿನಲ್ಲಿ ನನ್ನದೇ ಗೂಡು ಕಟ್ಟಿಕೊಳ್ಳುವ ಆಸೆಯಿಂದ ನಿವೇಶನವೊಂದನ್ನು ಕೊಳ್ಳಲು ಹುಡುಕಲು ಶುರುಮಾಡಿದೆ. ನನ್ನ ಅಭಿರುಚಿಗೆ ಹೊಂದುವ ಜಾಗ ಸಿಗದೆ ತೊಳಲಾಡುತ್ತಿದ್ದೆ. ಹೀಗೆ ನನ್ನ ಹುಡುಕಾಟ ಕಂಡ ಗೆಳೆಯರೊಬ್ಬರು ಸೈಟ್ ಒಂದನ್ನು ತೋರಿಸಲು ಕರೆತಂದರು. ಅದು ಮೈಸೂರು ಹೊರವಲಯದ ಸಾತಗಳ್ಳಿ ಬಳಿಯಲ್ಲಿತ್ತು. ಅಲ್ಲಿಗೆ ತಲುಪಲು ಸರಿಯಾದ ದಾರಿಯಿಲ್ಲದೆ ಹುಡುಕಾಡಿ ಹೊರಟಾಗ, ರಸ್ತೆ ಬದಿಯಿಂದ ಹಕ್ಕಿಯೊಂದು ಪುರ್ರನೆ ಹಾರಿದ ಅನುಭವವಾಯಿತು.

ದಿಟ್ಟಿಸಿ ನೋಡಿದಾಗ ಮೈಯೆಲ್ಲ ರಕ್ತವರ್ಣದ ಕೆಂಪನ್ನಾವರಿಸಿಕೊಂಡ ಗುಬ್ಬಿಯ ಗಾತ್ರದ ಹಕ್ಕಿಯದು. ಬರಿಯ ವನ್ಯಜೀವಿ ಛಾಯಾಗ್ರಹಣದಲ್ಲಷ್ಟೇ ಆಸಕ್ತಿಯಿದ್ದ ನನಗೆ ಈ ಹಕ್ಕಿ ಮನಸೆಳೆಯಿತು. ಇದರ ಹೆಸರು ತಿಳಿಯದಿದ್ದರೂ ಕಣ್ಣೆದುರು ಕಾಮನಬಿಲ್ಲು ಕಟ್ಟಿತ್ತು. ಗೆಳೆಯ ಸೈಟು ತೋರಿಸಿದಾಗ, ಅದು ಅನೇಕ ಹಕ್ಕಿಗಳ ಆವಾಸಸ್ಥಾನ ಎಂಬುದು ನೋಡಿದ ತಕ್ಷಣ ಅನಿಸಿತು. ಅದನ್ನೇ ಖರೀದಿಸಬೇಕೆಂದು ನಿರ್ಧರಿಸಿಬಿಟ್ಟೆ.

ಮನೆ ಕಟ್ಟಲು ತೊಡಗಿದಾಗ ಹಕ್ಕಿಗಳ ಆವಾಸಸ್ಥಾನದಲ್ಲಿ ಅವುಗಳ ಅವಕಾಶವನ್ನು ನಾನು ಕಿತ್ತುಕೊಂಡು ಮನೆಕಟ್ಟುತ್ತಿರುವ ಕೀಳರಿಮೆ ಕಾಡತೊಡಗಿತ್ತು. ನನ್ನ ಮನೆಯ ಆರ್ಕಿಟೆಕ್ಟ್ ಸುಲಭ ಪರಿಹಾರ ಒದಗಿಸಿದರು. ಮನೆ ಕಟ್ಟುವುದರ ಜೊತೆ ಜೊತೆಗೆ ಮನೆಯ ಗೋಡೆಗಳಲ್ಲಿ ಹಕ್ಕಿಗಳಿಗೂ ಗೂಡು ನಿರ್ಮಿಸುವ ಹಾಗೆ ವ್ಯವಸ್ಥೆ ಮಾಡಿಬಿಟ್ಟರು.

ಗೋಡೆಗಳಿಗೆ ಪುಟ್ಟ ಪುಟ್ಟ ಪೈಪುಗಳನ್ನಿಟ್ಟು, ಅವುಗಳಲ್ಲಿ ಪಕ್ಷಿಗಳು ಗೂಡು ನಿರ್ಮಿಸಿ ನನ್ನೊಟ್ಟಿಗೆ ವಾಸಿಸುವಂತೆ ಮಾಡಿಬಿಟ್ಟರು. ಇವತ್ತಿಗೂ ಆ ಗೋಡೆಯ ಗೂಡುಗಳಲ್ಲಿ ಸೀಸನ್‌ಗೆ ತಕ್ಕಹಾಗೆ ಅನೇಕ ಸ್ಥಳೀಯ ಹಕ್ಕಿಗಳು ಗೂಡುಕಟ್ಟಿ ಮೊಟ್ಟೆಯಿಟ್ಟು ಮರಿಮಾಡಿ ಸಂಭ್ರಮಿಸಿವೆ. ಆ ಸಂಭ್ರಮದಲ್ಲಿ ನಾವೂ ಪಾಲುಗೊಂಡ ಖುಷಿ ನಮಗೆ.

ಚಿಟ್ಟು ಮಡಿವಾಳ (ಇಂಡಿಯನ್ ರಾಬಿನ್), ಬೇಲಿ ಚಟಗ (ಬುಷ್ ಚಾಟ್), ಬೆಳ್ಳಿ ಕೊಕ್ಕಿನ ರಾಟವಾಳ (ಇಂಡಿಯನ್ ಸಿಲ್ವರ್ ಬಿಲ್), ಪಿಕಳಾರ (ಬುಲ್ ಬುಲ್), ಬೆಳುವ (ಲಾಫಿಂಗ್ ಡವ್), ಸೂರಕ್ಕಿ (ಸನ್ ಬರ್ಡ್) – ಹೀಗೆ ಇನ್ನೂ ಅನೇಕ, ನಾನು ಕಂಡು ಕೇಳರಿಯದ ಹಕ್ಕಿಗಳು ಮೊಟ್ಟೆಯಿಟ್ಟು ಮರಿ ಮಾಡಿ ಕೊಂಡೊಯ್ದಿವೆ.

ನಾವು ಮನೆಗೆ ವಾಸಕ್ಕೆ ಬಂದ ಸ್ವಲ್ಪ ದಿನಕ್ಕೇ ಮೊದಲು ನೋಡಿದ ರಕ್ತವರ್ಣದ ಹಕ್ಕಿ ನನ್ನ ಮನೆಯ ಕಾಂಪೌಂಡಿಗೆ ಹೊಂದಿಕೊಂಡು ಬೆಳೆದ ಪೊದೆಯ ನಡುವಿಂದ ಒಮ್ಮೆ ಪುರ್ರನೆ ಹಾರಿತು. ಅದನ್ನು ಕಂಡು ಕಾಯುತ್ತಾ ಕಾದು ಕುಳಿತೆ. ಹಕ್ಕಿ ವೀಕ್ಷಣೆಗೆ ತುಂಬಾ ತಾಳ್ಮೆ ಬೇಕೆಂಬುದು ಆಗಲೇ ಕಲಿತದ್ದು. ಅವಸರದ ಬದುಕಿನಿಂದ ಬಂದವನಿಗೆ ಹಕ್ಕಿ ತಾಳ್ಮೆ ಕಲಿಸಿದ್ದು ಇಲ್ಲೇ.

ಗಂಟೆಗಟ್ಟಲೆ ಒಂದೇ ಕಡೆಯಲ್ಲಿ ಅಲ್ಲಾಡದ ಹಾಗೆ ಅದನ್ನೇ ಗಮನಿಸುತ್ತಾ ಕುಳಿತಿದ್ದೆ. ಹೀಗೆ ಕುಳಿತಿದ್ದು ವ್ಯರ್ಥವಾಗಲಿಲ್ಲ. ತುಂಬಾ ಸಮಯದ ನಂತರ ಇದ್ದಕ್ಕಿದ್ದ ಹಾಗೆ ಹತ್ತಿಯ ಉಂಡೆಯೊಂದನ್ನು ಕೊಕ್ಕಲ್ಲಿ ಕಚ್ಚಿಹಿಡಿದು ಎದುರು ಗಿಡದ ಟೊಂಗೆಯ ಮೇಲೆ ಬಂದು ಕುಳಿತು ನನ್ನನ್ನೇ ನೋಡುತ್ತಿತ್ತು. ಅಲುಗಾಡದೆ ಕುಳಿತ ನನ್ನಿಂದ ತೊಂದರೆಯಿಲ್ಲವೆಂದು ಅರಿತು ಸೀದಾ ಪೊದೆಯೊಳಗೆ ನುಗ್ಗಿ ಮಿಂಚಿನಂತೆ ಮಾಯವಾಯಿತು. ಈ ಕಾಮನಬಿಲ್ಲನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವ ಉದ್ದೇಶದಿಂದ ಕ್ಯಾಮೆರಾ ತರಲು ಮನೆಯೊಳಗೆ ಓಡಿದೆ. ದಿನವೂ ಅದರ ದಿನಚರಿಯನ್ನು ಗಮನಿಸುವುದೇ ನನ್ನ ಕೆಲಸವಾಯಿತು. ಒಮ್ಮೆ ಪುಕ್ಕ ಹಿಡಿದು ತಂದರೆ, ಇನ್ನೊಮ್ಮೆ ಸಗಣಿಯ ಉಂಡೆ, ಹುಲ್ಲಿನ ದಳ, ಹುಲ್ಲಿನ ಹೂ, ಮನೆ ನಿರ್ಮಾಣದ ಅನೇಕ ಬಗೆಯ ಮೆತ್ತಗಿನ ಸಾಮಗ್ರಿಗಳನ್ನು ತಂದು ಮನೆ ನಿರ್ಮಿಸಿಯೇ ಬಿಟ್ಟಿತು.

ಈ ಹಕ್ಕಿಯ ಕುರಿತು ಎಲ್ಲಾ ಜಾಲಗಳನ್ನು ತಡಕಾಡಿದೆ, ಸ್ನೇಹಿತರಲ್ಲಿ ಕೇಳಿದೆ, ಆಗ ತಿಳಿದದ್ದು ಇದು ಕೆಂಪು ಮುನಿಯ ಅಥವಾ ಕೆಂಪು ರಾಟವಾಳ ಎಂಬುದು. ಇದಕ್ಕೆ ಹೊಳೆಯುವ ಕೆಂಪು ವರ್ಣ ಬರುವುದು ಅದು ಮರಿ ಮಾಡುವ ಸಮಯದಲ್ಲಿ, ಅದು ಗಂಡಿಗೆ. ಹೆಣ್ಣು ಮಾಸಲು ಬೂದು ಬಣ್ಣದಲ್ಲಿರುತ್ತದೆ – ಕೊಕ್ಕು, ಗಿಣಿಯ ಕೊಕ್ಕಿನ ಹಾಗೆ ಕೆಂಪು ವರ್ಣ. ಉಳಿದ ದಿನಗಳಲ್ಲಿ ಗಂಡಿನ ಕೆಂಪು ವರ್ಣ ಮ್ಲಾನವಾಗಿರುತ್ತದೆ. ಗುಜರಾತಿನಲ್ಲಿ ಸಾಮಾನ್ಯವಾಗಿ ಕೆಂಪು ರಾಟವಾಳಗಳನ್ನು ಮನೆಗಳಲ್ಲಿ ಪಂಜರಗಳಲ್ಲಿಟ್ಟು ಸಾಕುಪ್ರಾಣಿಗಳಂತೆ ಸಾಕಲಾಗುತ್ತಿತ್ತು, ಮಾರಾಟದ ವ್ಯವಹಾರ ನಡೆಯುತ್ತಿತ್ತಂತೆ. ಈಶಾನ್ಯ ಭಾಗದ ಫೇಸ್‌ಬುಕ್ಕಿನ ಗೆಳೆಯರೊಬ್ಬರು ತಮ್ಮ ಮನೆಯಲ್ಲಿ ಇವುಗಳನ್ನು ಸಾಕಿಕೊಂಡಿರುವ ಬಗ್ಗೆ ಹೇಳಿದರು.

ಸಾಮಾನ್ಯವಾಗಿ ಇವು ಮೊಟ್ಟೆಯಿಟ್ಟು 18ರಿಂದ 21 ದಿನಗಳವರೆಗೆ ಕಾವು ಕೊಟ್ಟು ಮರಿ ಮಾಡುತ್ತವೆ. ನಂತರ 10 ದಿನಗಳಲ್ಲಿ ರೆಕ್ಕೆ ಬಲಿಸಿ ಆಕಾಶದ ಅನಂತತೆಯಲ್ಲಿ ಹಾರಿಬಿಡುತ್ತವೆ. ಇವುಗಳು ಗೂಡುಕಟ್ಟುವ ಸಾಮಗ್ರಿಗಳನ್ನು ಕೊಕ್ಕಿನಲ್ಲಿ ಹಿಡಿದು ತರುವುದನ್ನು ಸೆರೆಹಿಡಿಯುವುದೇ ಈ ಹಕ್ಕಿಗಳ ಫೋಟೊಗ್ರಫಿ ವಿಶೇಷತೆ. ಬಣ್ಣ ಬಣ್ಣದ ಪುಕ್ಕಗಳು, ಎಕ್ಕದ ಹತ್ತಿ, ಇವೆಲ್ಲದರ ಮೈಬಣ್ಣದ ಹಿನ್ನೆಲೆಯಲ್ಲಿ ಉಜ್ವಲವಾಗಿ ಹೊಳೆಯುತ್ತವೆ. ಸೆಪ್ಟೆಂಬರ್‌ನಿಂದ ಡಿಸೆಂಬರ್ ಇವು ಮರಿ ಮಾಡುವ ಕಾಲ.

ಇವುಗಳ ಶತ್ರುಗಳೆಂದರೆ ಇತರೆ ಸರೀಸೃಪಗಳು ಹಾಗೂ ಪರಭಕ್ಷಕ ಹಕ್ಕಿಗಳು – ಕೆಂಭೂತ ಮತ್ತು ಶಿಕ್ರ ಅಥವಾ ಬಿಜ್ಜು ಎಂಬ ಪುಟ್ಟ ಹದ್ದು, ಮುಂತಾದವು. ಈಚೀಚೆಗೆ ನಿಧಾನಕ್ಕೆ ನನ್ನ ಮನೆಯ ಸುತ್ತ ಮನೆಗಳು ಏಳುತ್ತಿವೆ. ನಿತ್ಯ ಕೇಳಿಸುತ್ತಿದ್ದ ಪಕ್ಷಿಗಳ ಕಲರವ ಕರಗುತ್ತಿದೆ. ಹಗಲು–ರಾತ್ರಿ ತಮ್ಮ ಚಿಲಿಪಿಲಿಯಿಂದ ಮುದಗೊಳಿಸುತ್ತಿದ್ದ ಪಕ್ಷಿಕಾಶಿ ಬರಿದಾಗುತ್ತಿರುವ ಆತಂಕ ನನಗೆ.

ಪ್ರತಿಕ್ರಿಯಿಸಿ: feedback@sudha.co.in